# ಓದಿನಲ್ಲಿ ಉತ್ತಮ ಹವ್ಯಾಸಗಳು

'ಜ್ಯೋತಿಷ್ಮತಿ'

ಪ್ರಿಯ ವಿದ್ಯಾರ್ಥಿಗಳೇ,

ನಿಮ್ಮ ಅಧ್ಯಯನ ಅತ್ಯಂತ ಉತ್ತಮವಾಗಿ ಇರಬೇಕು ಎಂದು ನೀವು ಬಯಸುತ್ತೀರಲ್ಲವೆ? ಹಾಗಿದ್ದರೆ, ಓದಿನಲ್ಲಿ ಈ ಕೆಲವು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು ಸೂಕ್ತ.

### ೧. ತರಗತಿಗೆ ಯಾವಾಗಲೂ ತಯಾರು ಮಾಡಿಕೊಳ್ಳಿ

ನಿಮಗೆ ತಿಳಿದಿರಬಹುದು, ಅಧ್ಯಾಪಕರು ತರಗತಿಯಲ್ಲಿ ಪಾಠ ಮಾಡಲು ಬರುವ ಮೊದಲು ಚೆನ್ನಾಗಿ ತಯಾರು ಮಾಡಿ ಬಂದಿರುತ್ತಾರೆ. ವಿದ್ಯಾರ್ಥಿಗಳಿಗೆ ಏನನ್ನು ಕಲಿಸಬೇಕು, ಹೇಗೆ ಕಲಿಸಬೇಕು ಎನ್ನುವುದಕ್ಕಾಗಿ ಅವರು ಹೀಗೆ ಮಾಡುತ್ತಾರೆ.

ಅದೇ ರೀತಿ ವಿದ್ಯಾರ್ಥಿಗಳೂ ತಯಾರು ಮಾಡಿ ಬರುವುದು ಅತ್ಯಂತ ಮುಖ್ಯ. ಆದರೆ ನಿಮ್ಮ ಉದ್ದೇಶ ಬೇರೆ – ಅಧ್ಯಾಪಕರು ಕಲಿಸುವುದನ್ನು **ಚೆನ್ನಾಗಿ ಕಲಿಯುವುದು** ನಿಮ್ಮ ಉದ್ದೇಶ. ಯಾವ ರೀತಿಯ ತಯಾರು ಮಾಡಿಕೊಳ್ಳಬಹುದು?

೧) ಹಿಂದಿನ ದಿನದ ಪಾಠವನ್ನು ಓದಿಕೊಳ್ಳುವುದು. ಇದರಿಂದ ವಿಷಯವನ್ನು ಅರ್ಥಮಾಡಿಕೊಳ್ಳುವುದರಲ್ಲಿ ತಡೆ ಉಂಟಾಗದೆ, ಹಿಂದಿನ ದಿನದ ಪಾಠಕ್ಕೂ ಇಂದು ಮಾಡುವ ಪಾಠಕ್ಕೂ ಇರುವ ಸಂಬಂಧ ಅರ್ಥವಾಗುವುದು.

೨) ಹಿಂದಿನ ಪಾಠಗಳನ್ನು ಓದುವಾಗ ಕಂಡುಬಂದ ಸಂದೇಹಗಳನ್ನು ನೋಟ್ ಪುಸ್ತಕದಲ್ಲಿ ಗುರುತು ಹಾಕಿಕೊಳ್ಳುವುದು. ಅದನ್ನು ಇಂದಿನ ತರಗತಿಯಲ್ಲಿ ಅಧ್ಯಾಪಕರನ್ನು ಕೇಳಿ ಪರಿಹರಿಸಿಕೊಳ್ಳಬೇಕು.

೩) ಇಂದು ಮಾಡಲಿರುವ ಪಾಠವನ್ನು ನೀವೇ ಓದಿ ಅರ್ಥಮಾಡಿಕೊಳ್ಳಲು ಯತ್ನಿಸಿ. ಇದರಿಂದ ಪಾಠ ಇನ್ನಷ್ಟು ಅರ್ಥವಾಗುವುದು.

೪) ಮಾನಸಿಕ ಸಿದ್ಧತೆ: ಪಾಠ ಆರಂಭವಾಗುವ ಮುನ್ನ ನಿಮ್ಮ ಮನಸ್ಸು ಅದನ್ನು ಚೆನ್ನಾಗಿ ಗ್ರಹಿಸಲು, ಸ್ವೀಕರಿಸಲು ಸಿದ್ಧವಾಗುವಂತೆ ನೋಡಿಕೊಳ್ಳಿ. ಪಠ್ಯಕ್ಕೆ ಸಂಬಂಧಪಡದ ವಿಷಯ, ಆಸಕ್ತಿ, ಚಿಂತನೆಗಳು ನಿಮಗೆ ಅಡ್ಡಿ ಮಾಡದಂತೆ ಎಚ್ಚರ ವಹಿಸಿ.

### ೨) ನಿಮ್ಮ ಅಭ್ಯಾಸಗಳನ್ನು ಆಯಾ ಸಮಯದಲ್ಲೇ ಮುಗಿಸಿ

ಪ್ರತಿಯೊಂದು ಪಠ್ಯವಿಷಯಕ್ಕೂ ಆಯಾ ರೀತಿಯಲ್ಲೇ ಅಭ್ಯಾಸ ಮಾಡಲು ಕೊಟ್ಟಿರುತ್ತಾರೆ. ಅಧ್ಯಾಪಕರು ನೀಡುವ ಈ ಅಭ್ಯಾಸಗಳು ನಿಮ್ಮ ಓದಿಗೆ ಸಹಾಯಕವಾಗಿರುತ್ತವೆ. ಆದ ಕಾರಣ ಅಂದಂದಿನ ಅಭ್ಯಾಸಗಳನ್ನು ಅಂದಂದೇ ಮುಗಿಸುವುದು ಅತ್ಯುತ್ತಮ ಹವ್ಯಾಸ. ಕಾಟಾಚಾರಕ್ಕೆ ಅಭ್ಯಾಸ ಮಾಡಿ ಮುಗಿಸದೆ, ಅದರಲ್ಲೇ ಪೂರ್ತಿಯಾಗಿ ನಿಮ್ಮ ಗಮನ ಇರುವಂತೆ ನೋಡಿಕೊಳ್ಳಿ. ನಿಮ್ಮ ವ್ಯಾಸಂಗದಲ್ಲಿ ಅಭ್ಯಾಸಗಳು ಎಷ್ಟೊಂದು ಸಹಾಯಕವೆಂದು ಮುಂದೆ ನಿಮಗೆ ಅರ್ಥವಾಗುವುದು.

### ೩. ತರಗತಿಯಲ್ಲಿ ಮಾಡಿಕೊಳ್ಳುವ ನೋಟ್ಸ್‌ಗಳನ್ನು ಅಂದಂದೇ ಮನಸ್ಸಿಟ್ಟು ಓದಿಕೊಳ್ಳಿ



ಪರೀಕ್ಷೆ ಬಂದಾಗ ಅಥವಾ ಕ್ಲಾಸ್ ಟೆಸ್ಟ್ ಹತ್ತಿರ ಬಂದಾಗ ಓದುವ ಪ್ರವೃತ್ತಿ ಸಾಮಾನ್ಯವಾಗಿ ಎಲ್ಲರಲ್ಲಿ ಇರುತ್ತದೆ. ಆದರೆ ಅಂದಂದು ಮಾಡಿದ ಪಾಠ ಹಾಗೂ ಅಂದಂದಿನ ನೋಟ್ಸ್ ಇವನ್ನು ಅಂದಂದೇ ಓದಿ ಮನನ ಮಾಡಿಕೊಳ್ಳುವುದು ಬಹಳ ಮುಖ್ಯ. ಹೀಗೆ ಮಾಡಿದರೆ ಪರೀಕ್ಷೆ-ಟೆಸ್ಟ್ ಬಂದಾಗ ಅದಕ್ಕಾಗಿಯೇ ಓದಲು ಕುಳಿತುಕೊಳ್ಳಬೇಕಿಲ್ಲ. ದಿನನಿತ್ಯ ನಿಯಮಿತವಾಗಿ, ಸಹಜವಾಗಿ ಓದುವುದೇ ನಿಮ್ಮ ಹವ್ಯಾಸವಾಗಿ ಬಿಡುತ್ತದೆ.

### ೪. ಪ್ರತಿದಿನ ಸ್ವಲ್ಪ ಹೆಚ್ಚಿನ ಸಮಯವನ್ನು ಓದಿಗಾಗಿ ಮೀಸಲಿಡಿ.

ದಿನನಿತ್ಯದ ಓದು, ಅಭ್ಯಾಸ, ದೈನಂದಿನ ತಯಾರಿ ಇವೆಲ್ಲ ನಡೆಯಲಿ. ಆದರೆ ಇದಲ್ಲದೆ ಒಂದರ್ಧ ಗಂಟೆ ಹೆಚ್ಚಿನ ಸಮಯ ನಿಮ್ಮ ಓದಿಗಾಗಿ ಇರಲಿ. ಯಾವುದೇ ಸಂದೇಹ, ಗೊಂದಲಗಳ ಪರಿಹಾರ, ಹೆಚ್ಚಿನ ಓದು, ಪೂರಕ ತಯಾರಿ ಇತ್ಯಾದಿಗಳನ್ನು ಈ ಸಮಯದಲ್ಲಿ ಮಾಡಿಕೊಳ್ಳಿ. ಕೆಲವೊಮ್ಮೆ ಇಂತಹ ಹೆಚ್ಚಿನ ಅವಧಿ ಅತ್ಯಂತ ಸಹಾಯಕವಾಗುತ್ತದೆ.

ಈ ಹವ್ಯಾಸಗಳನ್ನು ರೂಢಿಸಿಕೊಳ್ಳಲು ಆಸಕ್ತಿ ಅತ್ಯಂತ ಮುಖ್ಯ. ನೀವೇ ಇಷ್ಟಪಟ್ಟು ರೂಢಿಸಿಕೊಳ್ಳುವ ಹವ್ಯಾಸಗಳು ನಿಮ್ಮನ್ನು ಖಂಡಿತವಾಗಿ ಯಶಸ್ಸಿನ ಕಡೆಗೆ ಕರೆದೊಯ್ಯುತ್ತವೆ. ನಿಮ್ಮ ವ್ಯಾಸಂಗ ನಿಮಗೇ ಅಚ್ಚರಿ ಮೂಡಿಸುತ್ತದೆ. ✶